ದಿನಾಂಕ: 19-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: **ಶ್ರೀ ಎಸ್ ಕೆ ಕೋಠಾ ವಕೀಲರಿಂದ:-**

1. ನನ್ನ ತಾಯಿಗೆ ಒಬ್ಬ ಅಕ್ಕ ಇದ್ದಾರೆ ಎಂದರೆ ಸರಿ. ಅಯ್ಯಮ್ಮನಿಗೆ ಎಷ್ಟು ಜನ ಮಕ್ಕಳೂ ಅಂತಾ ಗೊತ್ತಿಲ್ಲ. ಅಯ್ಯಮ್ಮನಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಅಂತಾ ಗೊತ್ತಿದೆ ಆದರೂ ಕೂಡಾ ಭಾಗ ಕೊಡಬೇಕಾಗುತ್ತದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಯ್ಯಮ್ಮನಿಗೆ ಶಿವಗ್ಯಾನಪ್ಪ, ದುರಗಮ್ಮ, ಬಸ್ಸಮ್ಮ, ಅಮರಮ್ಮ, ಮಲ್ಲಮ, ಹನುಮಂತ ಎಂಬ ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಹನುಮಂತ ತೀರಿಕೊಂಡಿದ್ದಾನೆಂದರೆ ನನಗೆ ಗೊತ್ತಿಲ್ಲ. ಹನುಮಂತನಿಗೆ ನಿಂಗಮ್ಮ ಎಂಬ ಹೆಂಡತಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯನ್ನು ದೇವದುರ್ಗ ತಾಲೂಕಿನ ಮದರಕಲ್ ಗೆ ಕೊಟ್ಟಿದ್ದರು ಎಂದರೆ ಸರಿ. ಅಯ್ಯಮ್ಮನನ್ನು ರೋಡಲಬಂಡಾಕ್ಕೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಟ್ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಳಿತನಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಲಿಂಗಸೂಗೂರು ತಾಲೂಕಿನಲ್ಲಿ ಯಾವುದೇ ಆಸ್ತಿ ಖರೀದಿಸಿಲ್ಲ ಎಂದರೆ ಸರಿ. ನನ್ನ ತಾಯಿ ಯಾವುದೇ ರೀತಿ ಆಸ್ತಿ ಖರೀದಿಸಿಲ್ಲ ಎಂದರೆ ಸರಿ.

2. ನನ್ನ ತಾಯಿಗೆ ಬಂದ ಆಸ್ತಿಗಳು ಸರ್ವೆ ನಂಬರ್ 66 ಹಿಸ್ಸಾ-2, ಕ್ಷೇತ್ರ 03 ಎಕರೆ 36 ಗುಂಟೆ ನನ್ನ ತಾಯಿ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂಬರ್ 19, ಕ್ಷೇತ್ರ 06 ಎಕರೆ 10 ಗುಂಟೆ ನನ್ನ ತಾಯಿ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂಬರ್ 66 ಹಿಸ್ಸಾ-5, ಕ್ಷೇತ್ರ 08 ಎಕರೆ 23 ಗುಂಟೆ ಇನ್ನೂ ಅಮರಮ್ಮನ ಹೆಸರಿಗೆ ಇದೆ ಎಂದರೆ ಸರಿ. ನಮ್ಮವ್ವನ ಹೆಸರಿಗೆ ಇನ್ನೊಂದು ಹೊಲ ಇದೆ ಅದನ್ನು ಸೇರಿಸಿಲ್ಲ. ನಾವು ನನ್ನ ತಾಯಿ ಹೆಸರಿಗೆ ಇರುವ ಆಸ್ತಿಯಲ್ಲಿ ಅಯ್ಯಮ್ಮನಿಗೆ ಪಾಲು ಕೊಟ್ಟಿಲ್ಲ ಏಕೆಂದರೆ ಅವರು ಸಹಿ ಕೊಟ್ಟು ಹೋಗಿರುತ್ತಾರೆ. ಸಹಿ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಯಾವುದೇ ರೀತಿ ಭಾಗ ಆಗಿಲ್ಲ. ಅಯ್ಯಮ್ಮ ಯಾವುದೇ ರೀತಿ ಸಹಿ ಕೊಟ್ಟಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎಲ್ಲಾ ಆಸ್ತಿಯನ್ನು ನಾವೆ ಕಬಳಿಸಬೇಕೆಂದು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಗೆ ಬಂದಷ್ಟು ಆಸ್ತಿ ಅಯ್ಯಮ್ಮನಿಗೆ ಬರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ/–
( ಚಂದ್ರಶೇಖರ ಪಿ. ದಿಡ್ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.